ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ (ಆ) ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳು (ಅ) ಸಿವಿಲ್, (ಇ) ರಾಜಸ್ವ ಸ್ವೀಕೃತಿಗಳು ಹಾಗೂ (ಈ) ವಾಣಿಜ್ಯ ವರದಿಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ಸದನವನ್ನು 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು ಭೋಜನ ವಿರಾಮದ ನಂತರ 4.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸಭೆಯು ಪುನ: ಸಂಜೆ 4 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(i) **ವಿಷಯ: ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನಕ್ಕೆ ಸಂಬಂಧಿಸಿದಂತೆ ದಿನಾಂಕ 11.02.2011ರ ಸರ್ಕಾರದ ಸುತ್ತೋಲೆಯನ್ನು ಮಾರ್ಪಾಡು ಮಾಡುವ ಬಗ್ಗೆ.**

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನವನ್ನು ಇತ್ತೀಚೆಗೆ ದಿನಾಂಕ 11.02.2011ರಲ್ಲಿ ಸರ್ಕಾರ ಆದೇಶ ಹೊರಡಿಸಿ ಭೌತಿಕ ಪರಿಶೀಲನೆಯಾಗುವವರೆಗೆ ಇದನ್ನು ಮುಂದೂಡಿ, ಅಲ್ಲಿಯವರೆಗೆ ಯಾವುದೇ ಹೊಸದಾಗಿ ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನವನ್ನು ಮಂಜೂರು ಮಾಡಬಾರದು ಎಂದು ತಿಳಿಸಿದ್ದಾರೆ. ಎಲ್ಲೆಲ್ಲಿ ವ್ಯತ್ಯಾಸವಾಗಿದೆ ಅದನ್ನು ಸರಿಪಡಿಸಲು ನಮ್ಮದೇನು ಅಭ್ಯಂತರವಿಲ್ಲ. ಆದರೆ ಬಡವರಿಗೆ ಇದನ್ನು ತಡೆಹಿಡಿದಿರುವುದರಿಂದ ಕಷ್ಟವಾಗಿದೆ. ಬಹುಶ: ನಿರ್ಗತಿಕರಿಗೆ ಕೊಡುವಂಥ

400 ರೂಪಾಯಿಗಳನ್ನು ತಡೆಹಿಡಿದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಈ ಸುತ್ತೋಲೆಯನ್ನು ಮಾರ್ಪಾಡು ಮಾಡಬೇಕು. ಮುಂದೆ ಯಾರ್ಯಾರಿಗೆ ಇದನ್ನು ಕೊಡಬೇಕು, ಯಾರ್ಯಾರು ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಲು ನಮ್ಮದೇನೂ ವಿರೋಧವಿಲ್ಲ. ಅದಕ್ಕೆ ನಾವೂ ಸಂಪೂರ್ಣವಾಗಿ ಸಹಕಾರ ಮಾಡುತ್ತೇವೆ. ನಿಜವಾದ ಫಲಾನುಭವಿಗಳಿಗೆ, ಬಡವರಿಗೆ ಅನ್ಯಾಯ ಮಾಡುವುದು ಒಳ್ಳೆಯದಲ್ಲ. ಇದರ ಮೂಲ ಉದ್ದೇಶ fail ಆಗುತ್ತದೆ. ದಯಮಾಡಿ ಈ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 11.02.2011ರ ಒಂದು ಸುತ್ತೋಲೆಯ ಬಗ್ಗೆ ಮಾನ್ಯ ಕೃಷ್ಣಪ್ಪನವರು ಪ್ರಸ್ತಾಪ ಮಾಡಿ ಸಂಧ್ಯಾ ಸುರಕ್ಷ, ವೃದ್ಧಾಪ್ಯ ವೇತನ, ನಿರ್ಗತಿಕ ವೇತನ, ಅಂಗವಿಕಲರ ವೇತನದ ಮಂಜೂರಾತಿಯನ್ನು ನಿಲ್ಲಿಸಿಬಿಟ್ಟಿದ್ದಾರೆಂದು ಸರ್ಕಾರದ ಗಮನಸೆಳೆದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಈ ವಿಚಾರವನ್ನು ತಂದು ಆ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳುವಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

(ii) ವಿಷಯ: ಶಾಸಕರ ಹಕ್ಕನ್ನು ಮೊಟಕುಗೊಳಿಸಿರುವ ಬಗ್ಗೆ.

ಶೀ ಎನ್. ಸುನಿಲ್ ಹೆಗಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಮೊನ್ನೆ ನನ್ನ ಕ್ಷೇತ್ರದ ಗೋಲಿಹಳ್ಳಿಯಲ್ಲಿ ಬಂದಾರಿನ ಶಂಕು ಸ್ಥಾಪನೆಗೆ ನೀರಾವರಿ ಇಲಾಖೆಯವರು ಉದ್ಘಾಟಕರಾಗಿ ನನ್ನನ್ನು ಕರೆದಿದ್ದರು. ಅತಿಥಿಯಾಗಿ ಸ್ಥಳೀಯ ಎಂಎಲ್‌ಸಿ ಯವರನ್ನು ಕರೆದಿದ್ದರು. ನಾನು ಇನ್ನು ಆ ಸ್ಥಳಕ್ಕೆ ಮುಟ್ಟುವ ಮೊದಲೇ ಅಲ್ಲಿಯ ಎಇಇ ಆದ ಎಂ.ಹೆಚ್. ಖಾನಾಪುರ್‌ರವರು, ಕಿರಿಯ ಇಂಜಿನಿಯರ್ ಆದ ರುದ್ರಮೂರ್ತಿ ತಳವಾರ್‌ರವರು ಮತ್ತು ಗುತ್ತಿಗೆದಾರ ಆಶೋಕ್ ಗೋಟನೇಕರ್‌ರವರು ಸೇರಿ ನನ್ನ ಹಕ್ಕನ್ನು ಮೊಟಕುಗೊಳಿಸಿ, ನಾನು ಅಲ್ಲಿಗೆ ಹೋಗುವ ಮೊದಲೇ ಉದ್ಘಾಟನಾ ಕಾರ್ಯಕ್ರಮವನ್ನು ಮಾಡಿ ನನ್ನ ಹಕ್ಕನ್ನು ಮೊಟಕುಗೊಳಿಸಿದ್ದಾರೆ. ಕೂಡಲೇ